ಅ) ಪರಿಶೀಲನೆಯಲ್ಲಿದೆ.

ಬೇಲೂರು ಮತ್ತು ಹಳೇಬೀಡುಗಳ ಪ್ರವಾಸೋದ್ಯಮ ಅಭಿವೃದ್ಧಿ

3048-ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೇಲೂರು ಮತ್ತು ಹಳೇಬೀಡುಗಳಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಪ್ರವಾಸೋದ್ಯಮ ಇಲಾಖೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಾಕಿಕೊಂಡಿರುವ ಕಾರ್ಯಕ್ರಮಗಳೇನು?*

ಆ) *ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಒದಗಿಸಲಾದ ಹಣವೆಷ್ಟು?*

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) ಕೇಂದ್ರ ಸರ್ಕಾರದ ನೆರವಿನಡಿಯಲ್ಲಿ ಬೇಲೂರು ಮತ್ತು ಹಳೇಬೀಡುಗಳಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1) ಬೇಲೂರಿನಲ್ಲಿ ಹೆಚ್ಚುವರಿ ವಸತಿ ಸೌಲಭ್ಯದ ನಿರ್ಮಾಣ.

2) ಹಳೇಬೀಡಿನಲ್ಲಿ ಹೊಯ್ಸಳ ಸಂದರ್ಶನ ಕೇಂದ್ರ.

ಆ) 1) ಬೇಲೂರಿನ ಯೋಜನೆಗೆ 43.44 ಲಕ್ಷ ರೂ.ಗಳು.

2) ಹಳೇಬೀಡಿನ ಯೋಜನೆಗೆ 20.00 ಲಕ್ಷ ರೂ.ಗಳು.

ಮಲೆನಾಡು ಅಭಿವೃದ್ಧಿ

3045-ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ(ಬೇಲೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಮಲೆನಾಡು ಅಭಿವೃದ್ಧಿ ಯೋಜನೆಯ ಅಂಗವಾಗಿ ಹಾಸನ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ.?*

ಆ) *ಬೇಲೂರು ತಾಲ್ಲೂಕಿಗೆ ಬಿಡುಗಡೆಯಾಗಿರುವ ಹಣದಲ್ಲಿ ತೆಗೆದುಕೊಳ್ಳಬೇಕೆಂದಿರುವ ಕಾಮಗಾರಿಗಳು ಯಾವುವು?*

ಶ್ರೀ ಕೆ.ಹೆಚ್. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಮಲೆನಾಡು ಅಭಿವೃದ್ಧಿ ಯೋಜನೆಯು ಈವರೆಗೆ ಅಸ್ತಿತ್ವಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಬೇಲೂರು ತಾಲ್ಲೂಕು ಕಛೇರಿ ಕಟ್ಟಡದ ದುರಸ್ತಿ

3129-ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತೆರಿಸುವ:

ಅ) *ಬೇಲೂರು ತಾಲ್ಲೂಕು ಕಛೇರಿ ಕಟ್ಟಡ ಶಿಥಿಲವಾಗಿದ್ದು ಈ ಕಟ್ಟಡ ಬದಲಾಯಿಸುವ ಸಲುವಾಗಿ ಹಾಗೂ ತಾಲ್ಲೂಕಿನ ಇತರೆ ಸರ್ಕಾರಿ ಕಟ್ಟಡಗಳಿಗೆ ಕಟ್ಟಡ ಒದಗಿಸುವ ಸಲುವಾಗಿ ಮಿನಿ ವಿಧಾನ ಸೌಧ ಕಟ್ಟಲು ಅಂದಾಜು ತಯಾರಾಗಿಲ್ಲವೆ?*

ಆ) *ಹಾಗಿದ್ದಲ್ಲಿ, ಈ ಮಿನಿ ವಿಧಾನ ಸೌದದ ಕಾರ್ಯ ಎಂದು ಪ್ರಾರಂಭಿಸಲಾಗುವುದು ಹಾಗೂ ಅದರ ಅಂದಾಜು ಮೊಬಲಗೆಷ್ಟು?*

ಶ್ರೀ ಜಿ. ಹೆಚ್ ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):

ಅ) ಇಲ್ಲ.

ಆ) ಮೇಲಿನ 'ಅ' ಕ್ಕೆ ನೀಡಲಾದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮುಲ್ಲಾಮಾರಿ ಯೋಜನೆಯ ಬಗ್ಗೆ

3071-ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್(ಬಸವಕಲ್ಯಾಣ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಅಪ್ಪರ್ ಮುಲ್ಲಾಮಾರಿ ಯೋಜನೆಗೆ ಇದುವರೆವಿಗೂ ಖರ್ಚಾಗಿರುವ ಒಟ್ಟು ಮೊತ್ತವೆಷ್ಟು?

ಆ) ಕಳೆದ ಸಾಲಿನಲ್ಲಿ ಈ ನೀರಾವರಿ ಯೋಜನೆಗೆ ಎಷ್ಟು ಹಣ ನಿಗದಿ ಮಾಡಲಾಯಿತು. ಮತ್ತು ಅದರಲ್ಲಿ ಖರ್ಚಾದ ಹಣವೆಷ್ಟು?

ಇ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಹಣ ಬೇಕಾಗುವುದು ಮತ್ತು ಪೂರ್ತಿ ನೀರಾವರಿ ಯೋಜನೆಯ ಕೆಲಸವನ್ನು ಮುಗಿಸಲು ಸರ್ಕಾರದವರ ಯೋಜನೆ ಏನು?

ಈ) ಇದುವರೆಗೆ ಎಷ್ಟು ಉಪವಿಭಾಗಗಳನ್ನು ಸ್ಥಳಾಂತರಿಸಲಾಗಿದೆ ಹಾಗೇ ಈ ರೀತಿ ಮಾಡಲು ಕಾರಣವೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ರೂ. 14.54 ಕೋಟಿ.

ಆ) 1990-91 ನೇ ಸಾಲಿನಲ್ಲಿ ನಿಗದಿಪಡಿಸಿದ ಹಣ ರೂ. 90 ಲಕ್ಷ ಖರ್ಚಾದ ಹಣ ರೂ. 131 ಲಕ್ಷ

ಇ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಇನ್ನೂ ರೂ. 82 ಲಕ್ಷಗಳು ಬೇಕಾಗುವುದು.

1991-92ನೇ ಸಾಲಿನಲ್ಲಿ ಕೆಲಸವನ್ನು ಮುಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ) ಕೆಲಸಗಳು ಮುಕ್ತಾಯ ಹಂತದಲ್ಲಿರುವುದರಿಂದ ಎರಡು ಉಪ ವಿಭಾಗಗಳನ್ನು ಸ್ಥಳಾಂತರಿಸಲಾಗಿದೆ.

ಚುಳಕೆ ನಾಲೆಯ ಬಗ್ಗೆ

3072-ಶ್ರೀ ಬಸವರಾಜ್ ಪಾಟೀಲ ಅಟ್ಟೂರು(ಬಸವಕಲ್ಯಾಣ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಚುಳಕೆ ನಾಲಾ ನೀರಾವರಿ ಯೋಜನೆಗೆ ಹೋದ ವರ್ಷ ಮಂಜೂರಾದ ಹಣವೆಷ್ಟು ಮತ್ತು ಖರ್ಚಾದ ಹಣವೆಷ್ಟು?

ಆ) ಮೇಲಿನ ಯೋಜನೆಗೆ ಹಣ ಮಂಜೂರಾದರೂ ಕೂಡಾ ಕೆಲಸ ಕಾರ್ಯಗಳು ಮಂದಗತಿಯಲ್ಲಿ ನಡೆಯಲು ಕಾರಣವೇನು?

ಇ) ಮಂಜೂರಾದ ಹಣವನ್ನು ಸಹ ಖರ್ಚು ಮಾಡುತ್ತಿರುವುದರ ಬಗ್ಗೆ ಸರ್ಕಾರದ ಕ್ರಮವೇನು?